**OS.No: 14/2021**
**PW.1**

**(ದಿಃ 12-10-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಶ್ರೀ ಎಸ್. ಪಿ. ವಾದಿ ಪರ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರ ರೂಪದಲ್ಲಿ ಸಲ್ಲಿಸಿರುತ್ತೇನೆ. ಅದನ್ನು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದ್ದು, ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳು ಸತ್ಯದಿಂದ ಕೂಡಿವೆ. ಅದನ್ನು ಓದಿಸಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಮರತೂರ ಗ್ರಾಮದ ಸರ್ವೇ ನಂಃ 194 ರ ಮುಟೇಷನ್ ಎಂಟ್ರಿಯ ನಕಲು ಪ್ರತಿಯನ್ನು ನಿಪಿ-1 ಎಂದು, ಸರ್ವೇ ನಂಃ 194 ರ ಕನ್ನಡದಲ್ಲಿ ಬರೆದ ಕಾಸರಾ ಪಹಣಿಯ ನಕಲು ಪ್ರತಿಯನ್ನು ನಿಪಿ-1(ಎ) ಎಂದು, ಎಂ. ಆರ್. ಸಂಖ್ಯೆ 252 ರ ದೃಡಿಕೃತ ನಕಲು ಪ್ರತಿಯನ್ನು ನಿಪಿ-2 ಎಂದು, ದಿಃ 01-03-2016 ರಂದು ಆದ ಖರೀದಿ ಪತ್ರದ ದೃಡಿಕೃತ ನಕಲು ಪ್ರತಿಯನ್ನು ನಿಪಿ-3 ಎಂದು, ಸರ್ವೇ ನಂಃ 194 ರ ಉತಾರೆಯ ನಕಲು ಪ್ರತಿಯನ್ನು ನಿಪಿ-4 ಎಂದು, ದಿಃ 18-09-2020 ರಂದು ಆದ ದಾನ ಪತ್ರದ ನಕಲು ಪ್ರತಿಯನ್ನು ನಿಪಿ-5 ಎಂದು, ಅದರ ಆಕಾರಬಂಧನ್ನು ನಿಪಿ-5(ಎ) ಎಂದು, ಎಂ. ಆರ್. ಸಂಖ್ಯೆ 32 ರ ಗಣಕಿಕೃತ ಪ್ರತಿಯನ್ನು ನಿಪಿ-6 ಎಂದು, ಸರ್ವೇ ನಂಃ 194/4 ರ ಪಹಣಿ ಪತ್ರಿಕೆಯನ್ನು ನಿಪಿ-7 ಎಂದು ಗುರುತಿಸಲಾಯಿತು. ಆದ್ದರಿಂದ ವಾದ ಪತ್ರದಲ್ಲಿ ಕೋರಿಕೊಂಡಂತೆ ದಾವೆಯನ್ನು ಡಿಕ್ರಿ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ.

**ಈ ಹಂತದಲ್ಲಿ ಶ್ರೀಮತಿ ಬಿ. ಎಂ. ಪಿ. ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**
**-Sd-**
**ಸಿವಿಲ್ ಮತ್ತು ಜೆ.ಎಮ್.ಎಫ್.ಸಿ.**
**ನ್ಯಾಯಾಧೀಶರು, ಶಹಬಾದ.**